II SRI M. RAJASHEKARA MURTHY (Minister for Finance & Institutional Finance & Statistic ) Sir, I beg to lay on the table of the House.

1 Notification No. FD 227 CSL 89. dated 2nd January, 1990 Amendment to Notification No. FD 164 CSO 79(I) dated 15th October 1981.

2 Notification No. FD 240 CSL 89, dated 2nd January, 1990 Amendment to notification No. FD 52 CSL 86 (I), dated 11th July, 1986.

MR. SPEAKER.— Papers laid.

III SRI K. H. RANGANATH (Minister for Agriculture, Horticulture, Education & Forests).— Sir I beg to lay on the table of the House.

1 Annual Audit Report on the Accounts of Karnataka University, Dharwad for the years 1980-81 & 1981-82 & 1982-83 & 1984-85

as required Under Section 42(3) of the Karnataka State Universities Act, 1976.

2 Annual Report of Mangalore University, Mangalore for the year 1987-88

as required Under Section 45 of the Karnataka State Universities Act 1976.

MR. SPEAKAR.— Papers laid.

IV SRI K. J. GEORGE (Minister for Food Civil Supplies and Transport).— Sir, I beg to lay on the table of the House.

Notification No. FTD 9 TMR 89, dated 30th December, 1989 The Karnataka Motor Vehicles (2nd Amendment) Rules, 1989.

MR. SPEAKER.— Papers laid.

ಶ್ರೀ ಎಲ್. ಆರ್. ಶಿವರಾಮೇಗೌಡ.— ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ, ಅದೇನೆಂದರೆ, ಗೋಣಿ ಕೊಪ್ಪಲಿನಲ್ಲಿ ಪೋಲೀಸರ ಸಮ್ಮುಖದಲ್ಲಿ ಜಿಲ್ಲಾ ಪರಿಷತ್ತಿನ ಸದಸ್ಯರೊಬ್ಬರ ಕಾರನ್ನು ಸುಟ್ಟು ಹಾಕಿರುವ ಬಗ್ಗೆ ಕಳುಹಿಸಿದ್ದೆ, ಅದು ಇವತ್ತಿನ ಕಾರ್ಯಕ್ರಮದ ಪಟ್ಟಿಯಲ್ಲಿ ಇಲ್ಲ,

ಅಧ್ಯಕ್ಷರು.— ಯಾವುದನ್ನು ಅಡ್ಮಿಟ್ ಮಾಡಿದ್ದೀವೆಯೋ ಅದು ಬಂದಿರುತ್ತದೆ. ಅಡ್ಮಿಟ್ ಮಾಡದಿದ್ದರೆ ಆ ವಿಷಯ ಕಾರ್ಯಕ್ರಮದ ಪಟ್ಟಿಯಲ್ಲಿ ಬರುವುದಿಲ್ಲ,

ಶ್ರೀ ಎಲ್. ಆರ್, ಶಿವರಾಮೇಗೌಡ.— ಜಿಲ್ಲಾ ಪರಿಷತ್ತಿನ ಸದಸ್ಯರೊಬ್ಬರ ಕಾರನ್ನು ಪೋಲೀಸರ ಸಮ್ಮುಖದಲ್ಲಿ ಸುಟ್ಟು ಹಾಕಿದ್ದಾರೆ. ಜಿಲ್ಲಾ ಪರಿಷತ್ತಿನ ಸದಸ್ಯರು ಜವಾಬ್ದಾರಿಯುತ ವ್ಯಕ್ತಿ ಈ ವಿಷಯ ಬಹಳ ಪ್ರಾಮುಖ್ಯವಾಗಿದೆ, ಆದ್ದರಿಂದ ತಾವು ಇದನ್ನು ಪರಿಗಣಿಸಿ ನಾನು ಈ ವಿಷಯವನ್ನು ಎತ್ತಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ,— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕಿಂತ ಮುಂಚಿತವಾಗಿ ಒಂದು ವಿಷಯವನ್ನು ಅವರ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಸಾಲ ಮನ್ನಾ ವಿಚಾರದಲ್ಲಿ ನಿನ್ನೆ ನಡೆದಂತಹ ಚರ್ಚೆಗೆ ಉತ್ತರ ಕೊಡವುದಕ್ಕಿಂತ ಮುಂಚಿತವಾಗಿ ಒಂದು ವಿಷಯವನ್ನು ತಿಳಿಯಬಯಸುವುದೇನೆಂದರೆ, ಎಲ್ಲಾಪುರ ಗ್ರಾಮದಲ್ಲಿ ಕೃಷಿ

ಸಾಲವನ್ನು ಕಡ್ಡಾಯವಾಗಿ ವಸೂಲ್ ಮಾಡಲು ಜಪ್ತಿ ಕಾರ್ಯಕ್ರಮವನ್ನು ಪ್ರಾರಂಭ ಮಾಡಿ ಪಿ. ಎಲ್. ಡಿ. ಬ್ಯಾಂಕ್‌ನವರು ಅವರ ಜಮೀನುಗಳನ್ನು ಹರಾಜು ಮಾಡುತ್ತಾ ಇದ್ದಾರೆ. ಈ ರೀತಿ ಸಮಾರು ೨೨ ಜನ ರೈತರ ಜಮೀನಾನನ್ನು ಹರಾಜ್‌ಗೆ ಇಟ್ಟಿದ್ದಾರೆಂದು ತಿಳಿದು ಬಂದಿದೆ. ಆ ರೈತರಲ್ಲಿ ದೊಡ್ಡ ಪ್ರಮಾಣದಲ್ಲಿ ಈ ರೀತಿಯ ಕಾರ್ಯಚರಣೆಗೆ ಪ್ರತಿಭಟನೆ ಮಾಡಿದ್ದಾರೆ. ಈ ವಿಷಯದಲ್ಲೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಬೆಳಕು ಚೆಲ್ಲಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

## ರಾಜ್ಯದ ರೈತರ ಕೃಷಿ ಸಾಲ ಮನ್ನಾ ಮಾಡುವ ಚರ್ಚೆಗೆ ಮುಖ್ಯಮಂತ್ರಿಯವರಿಂದ ಉತ್ತರ.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೇ, ರೈತರ ಸಾಲ ಮನ್ನಾ ಮಾಡುವ ಸಮಸ್ಯೆ, ಚುನಾವಣೆ ನಂತರ ಇಡೀ ರಾಜ್ಯದಲ್ಲಿ ಮತ್ತು ಎರಡೂ ಸದನಗಳಲ್ಲಿ ವಿಫಲವಾಗಿ ಚರ್ಚೆಗೆ ಒಳಗಾಗಿದೆ. ಬಹುಶಃ ಇಷ್ಟು ವಿಫಲವಾದ ಚರ್ಚೆಗೆ ಯಾವ ಸಮಸ್ಯೆ ಕೂಡ ಒಳಗಾಗಿಲ್ಲವೆಂದು ನನ್ನ ಭಾವನೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಚರ್ಚೆ ಕೂಡ ವಿಫಲವಾಗಿದೆ.

ಶ್ರೀ ವೀರೇಂದ್ರ ಪಾಟೀಲ್.—ಈ ಚರ್ಚೆ ವಿಫಲವಾಗುತ್ತದೆಯೋ ಫಲಕಾರಿಯಾಗುತ್ತದೋ ಎನ್ನುವುದು ನಾವೆಲ್ಲರೂ ಕೂಡಿ ವಿಚಾರ ಮಾಡಬೇಕಾದಂಥ ಪ್ರಶ್ನೆಯಾಗಿದೆ. ನಾನು ಇದನ್ನು ಏಕೆ ಹೇಳಿದೆ ಎಂದರೆ, ಈ ಸಮಸ್ಯೆಯು ಗಾತ್ರ ಏನು, ಮ್ಯಾಗ್ನಿಟ್ಯೂಡ್ ಆಫ್ ದಿ ಪ್ರಾಬ್ಲಮ್, ಏನು ಎಂದು ಅದನ್ನು ನಾವು ತಿಳಿದುಕೊಳ್ಳುವುದು ಅವಶ್ಯಕ. ನಾನು ಸಂಗ್ರಹ ಮಾಡಿದ ೨೦ಕಿ ಅಂಶಗಳ ಪ್ರಕಾರ, ನನ್ನ ಹತ್ತಿರ ಇರುವ ಲೇಟೆಸ್ಟ್ ಫಿಗರ್ಸ್ ೧೯೮೮ರಿಂದ. ಎಷ್ಟು ಜನ ಸಹಕಾರಿ ಸಂಘಗಳ ಮುಖಾಂತರ ಅಂದರೆ, ಅಪೆಕ್ಸ್ ಬ್ಯಾಂಕ್‌ಗಳಾಗಲೀ, ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಬ್ಯಾಂಕುಗಳಾಗಲೀ ಕ್ರೆಡಿಟ್ ಕೊ-ಆಪರೇಟಿವ್ ಆಗಲಿ ಇವುಗಳ ಮುಖಾಂತರ ನಮ್ಮ ರಾಜ್ಯದಲ್ಲಿ ಸಾಲ ಪಡೆದಿರುವಂಥ ರೈತರು ಎಷ್ಟು ? ೧೯೮೮ರ ಪ್ರಕಾರ ಲೋನಿಸ್ ಸಂಖ್ಯೆ ೭ ಲಕ್ಷ ೬೦ ಸಾವಿರ ಇವರಲ್ಲಿ ವಿೂಡಿಯಮ್ ಟರ್ಮ್ ಲೋನಿಸ್ ಸಂಖ್ಯೆ ೯೦ ಸಾವಿರ, ಲಾಂಗ್ ಟರ್ಮ್ ಲೋನೀಸ್ ಸಂಖ್ಯೆ ೬೭ ಸಾವಿರ. ಒಟ್ಟು ೮ ಲಕ್ಷ ೭೭ ಸಾವಿರ ರೈತರು ಮಾತ್ರ ಸಹಕಾರಿ ಸಂಘಗಳ ಮುಖಾಂತರ ಸಿಕ್ಕುವಂಥ ಸಾಲದ ಲಾಭ ಪಡೆಯುತ್ತಿದ್ದಾರೆ. ಒಟ್ಟು ರೈತರ ಸಂಖ್ಯೆ ಎಷ್ಟು ಎನ್ನುವುದನ್ನು ನಾವು ವಿಚಾರ ಮಾಡಬೇಕಾಗುತ್ತದೆ, ಕರ್ನಾಟಕದಲ್ಲಿ ೪ ಕೋಟಿ ಜನ ಇದ್ದಾರೆ. ಈ ೪ ಕೋಟಿ ಜನರಲ್ಲಿ ಬಹುಶಃ ೭೫ ಪರ್‌ಸೆಂಟ್‌ನಷ್ಟು ಜನ, ಅಂದರೆ ೩ ಕೋಟಿ ಜನರು ಹಳ್ಳಿಗಳಲ್ಲಿ ಇದ್ದಾರೆ. ೩ ಕೋಟಿ ಜನ ಹಳ್ಳಿಯಲ್ಲಿ ಇದ್ದವರೆಲ್ಲಾ ಇವತ್ತು ರೈತರು ಇರಲಿಕ್ಕೆ ಇಲ್ಲ. ಅವರಲ್ಲಿ ಅನೇಕ ಜನ ಭೂ ಹೀನರೂ ಇದ್ದಾರೆ. ಬಹುಶಃ ಅದೆನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ೧ ಕೋಟಿ ಜನ ಭೂ ಹೀನರಿದ್ದರೆ, ೨ ಕೋಟಿ ಜನ ರೈತರು ಇದ್ದಾರೆಂದು ಲೆಕ್ಕ ಹಾಕಬಹುದು. ಒಟ್ಟು ಇಷ್ಟು ಜನರಲ್ಲಿ ಸುಮಾರು ೫೦ ಲಕ್ಷ ಜನರು ಈ ಸಾಲದ ಲಾಭವನ್ನು ಪಡೆಯುತ್ತಿದ್ದಾರೆ. ಎರಡು ಕೋಟಿ ರೈತರಲ್ಲಿ ಕೇವಲ ೫೦ ಲಕ್ಷ ರೈತರು ಮತ್ತು ರೈತ ಕುಟುಂಬದವರಿಗೆ ಮಾತ್ರ ಈ ಅವಕಾಶ ಸಿಗುತ್ತಿದೆ ಎಂದಾಯಿತು. ಈ ಸಾಲ ಮನ್ನಾ ಮಾಡುವುದರ ಬಗ್ಗೆ ಲೆಕ್ಕ ಹಾಕಿದರೆ ಈ ೫೦ ಲಕ್ಷ ಜನರಿಗೆ ಲಾಭ ಹೋಗುತ್ತದೆಯೇ ಹೊರತು ಉಳಿದ ಒಂದೂವರೆ ಕೋಟಿ ಜನ ರೈತರ ಕುಟುಂಬದವರಿಗೆ ಇದರ ಲಾಭ ಹೋಗುವುದಿಲ್ಲ. ಏಕೆಂದರೆ, ಈಗ ನಮ್ಮ ಮುಂದಿರುವ ಪ್ರಶ್ನೆ ಬರೀ ರೈತರ ಸಾಲ ಮನ್ನಾ ಮಾಡುವುದು ನಾನು ಕೆಲವು ವಿಚಾರಗಳನ್ನು ವಿಚಾರ ಮಾಡಿದ್ದೇನೆ. ಇವತ್ತು ರೈತರುಗಳಿಗೆ ಸಹಕಾರ ಸಂಘಗಳ ಮುಖಾಂತರ ಏನು ಸಾಲ ಸಿಗುತ್ತಿದೆ ಅದರ ಬಗ್ಗೆ ಹೇಳುವುದಾದರೆ, ಸರ್ಕಾರವು ನೇರವಾಗಿ ರೈತರುಗಳಿಗೆ ಸಾಲ ಕೊಡುವ ವ್ಯವಸ್ಥೆಯನ್ನು ಮಾಡಿಲ್ಲ. ಅದರಲ್ಲಿ ಸರ್ಕಾರದ ನೇರವಾದ ಸಾಲ ಇದ್ದರೆ ಅದು ತಕಾವಿ ಸಾಲ ಇರಬಹುದೇ, ಅದು ಎಷ್ಟು ಆಗಬಹುದೆಂಬ ನಾನು ಅಂಕಿ ಅಂಶ ಶೇಖರಣೆ ಮಾಡುತ್ತಿದ್ದೇನೆ. ನಾನು ಇದನ್ನು ಏಕೆ ಹೇಳುತ್ತಾ ಇದ್ದೇನೆ ಅಂದರೆ ಇವೊತ್ತು ನಮ್ಮ ದೇಶದಲ್ಲಿ ಸಹಕಾರ ಚಳುವಳಿಯು ಬೃಹದಾಕಾರವಾಗಿ ಬೆಳೆದಿದೆ. ಲೆಕ್ಕಾಚಾರ ಹಾಕಿದರೂ ಕೂಡ ಎರಡು ಕೋಟಿ ರೈತರಲ್ಲಿ ಕೇವಲ ಐವತ್ತು ಲಕ್ಷ ರೈತರು ಈ ಸಹಕಾರ ಚಳುವಳಿಯಲ್ಲಿ ಭಾಗವಹಿಸಿ ಸಹಕಾರಿ ಸಾಲದ ಲಾಭ ಪಡೆಯುತ್ತಾ ಇದ್ದಾರೆಯೇ ಹೊರತಾಗಿ ಉಳಿದ ಒಂದೂವರೆ ಕೋಟಿ ಜನ ರೈತರು, ರೈತವರ್ಗದವರು, ರೈತರ ಮನೆಯವರು, ಒಟ್ಟಾಗಿ ರೈತ ಬಾಂಧವರು ಇವತ್ತಿಗೂ ಸಾಲಗಾರನ ಮನೆ ಬಾಗಿಲಿಗೆ ಹೋಗುವಂಥ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.